

# ಚದುರಂಗದ ಚತುರ

## ದೊಮ್ಮರಾಜು ಗುಕೇಶ್

**ಭಾರತದ ಅಗ್ರಮಾನ್ಯ ಚೆಸ್ಸಿಗ ಗುಕೇಶ್ 'ಕ್ಯಾಂಡಿಡೇಟ್ಸ್ ಟೂರ್ನಿ 2024'ಕ್ಕೆ ಪ್ರವೇಶ ಪಡೆಯುವುದರೊಂದಿಗೆ, ಈ ಬಾರಿಯ ಕ್ಯಾಂಡಿಡೇಟ್ಸ್ ಪಂದ್ಯಾವಳಿಯ ಪುರುಷರ ವಿಭಾಗದ ಎಂಟು ಆಟಗಾರರಲ್ಲಿ ಭಾರತೀಯರ ಸಂಖ್ಯೆ ಮೂರಕ್ಕೇರಿದೆ. ಪ್ರಜ್ಞಾನಂದ ಹಾಗೂ ವಿದಿತ್ ಗುಜರಾತಿ ಅವರೊಂದಿಗೆ ಗುಕೇಶ್, ವಿಶ್ವ ಚಾಂಪಿಯನ್‌ಗೆ ಸವಾಲೆಸೆಯುವವರನ್ನು ನಿರ್ಧರಿಸುವ ಟೂರ್ನಿಯಲ್ಲಿ ಸೆಣಸಲಿದ್ದಾರೆ.**

■ ಪ್ರಮೋದ

ಪ್ರತಿ ಅಂತ್ಯವೂ ಹೊಸ ಆರಂಭಕ್ಕೆ ಮುನ್ನುಡಿ ಎನ್ನುವ ಮಾತನ್ನು ಭಾರತದ ಚೆಸ್ ಲೋಕಕ್ಕೆ ಹೋಲಿಸುವುದಾದರೆ, ಹೊಸತರ ಆರಂಭ ಬಲು ವೇಗವಾಗಿಯೂ ಆಕರ್ಷಕವಾಗಿಯೂ ಇದೆ.

ಸರಿಯಾಗಿ 37 ವರ್ಷಗಳ ಹಿಂದೆ ದೇಶದ ಅಗ್ರಮಾನ್ಯ ಆಟಗಾರ ಎಂಬ ಕಿರೀಟ ಪಡೆದಿದ್ದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರ ದೀರ್ಘಕಾಲದ ಆಧಿಪತ್ಯವನ್ನು ಯುವಪ್ರತಿಭೆ ದೊಮ್ಮರಾಜು ಗುಕೇಶ್ ಹಲವು ತಿಂಗಳುಗಳ ಹಿಂದೆ ಅಂತ್ಯಗೊಳಿಸಿದ್ದರು. 1986ರ ಜುಲೈ 1ರಿಂದ ಆನಂದ್ ದೇಶದ ಅಗ್ರ ಆಟಗಾರರಾಗಿದ್ದರು.

ಅಜರ್‌ಬೈಜಾನ್ ರಾಷ್ಟ್ರದಲ್ಲಿ ನಡೆದ ಚೆಸ್ ವಿಶ್ವಕಪ್ ಟೂರ್ನಿಯ ವೇಳೆ ಗ್ರ್ಯಾಂಡ್ ಮಾಸ್ಟರ್ ಗುಕೇಶ್ ರ್‍ಯಾಂಕಿಂಗ್‌ನಲ್ಲಿ ಆನಂದ್ ಅವರನ್ನು ಹಿಂದೆ ಹಾಕಿದ್ದರು. ಇದರಿಂದಾಗಿ ಸೆಪ್ಟೆಂಬರ್ ತಿಂಗಳ ಫಿಡೆ ಕ್ರಮಾಂಕ ಪಟ್ಟಿಯಲ್ಲಿ ಚೆನ್ನೈನ 17 ವರ್ಷದ ಗುಕೇಶ್ 2758 ರೇಟಿಂಗ್‌ನೊಡನೆ ಎಂಟನೇ ಸ್ಥಾನ ಪಡೆದುಕೊಂಡು ಭಾರತದ ಅಗ್ರಮಾನ್ಯ ಆಟಗಾರ ಎನಿಸಿಕೊಂಡರೆ, ಐದು ಬಾರಿ ವಿಶ್ವ ಚಾಂಪಿಯನ್ ಪಟ್ಟ ಪಡೆದಿದ್ದ ಆನಂದ್ 2754 ರೇಟಿಂಗ್‌ನಿಂದ 9ನೇ ಸ್ಥಾನದಲ್ಲಿದ್ದರು.

ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ಆನಂದ್ ಸಾಕಷ್ಟು ಟೂರ್ನಿಗಳಲ್ಲಿ ಯಶಸ್ಸು ಗಳಿಸಿ ದೀರ್ಘಕಾಲ ದೇಶದ ಚೆಸ್ ಲೋಕ ಆಳಿದವರು. ಅವರು ಹಾಕಿಕೊಟ್ಟ ಗಟ್ಟಿ ಬುನಾದಿಯ ಮೇಲೆ ಈಗ ಹೊಸ ಪ್ರತಿಭೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಯುವಪೀಳಿಗೆಯ ಸಾಧನೆಗೆ ತಲೆದೂಗಿರುವ ಆನಂದ್ 'ಈಗಿನ ಯುವ ಆಟಗಾರರು ಭಾರತದ ಚೆಸ್ ಸುವರ್ಣ ಪೀಳಿಗೆಯವರು' ಎಂದು ಬಣ್ಣಿಸಿದ್ದಾರೆ.

ಭಾರತದ ಹಲವು ರಾಜ್ಯಗಳಲ್ಲಿ ವಿಶ್ವನಾಥನ್ ಆನಂದ್ ಅವರ ಸಾಧನೆ ಪಠ್ಯವಾಗಿದೆ. ಅನೇಕ ಭಾರತೀಯರಿಗೆ ಈಗಲೂ ದೇಶದ ಚೆಸ್ ವಿಚಾರ ಮಾತನಾಡಿದರೆ ನೆನಪಾಗುವ ಮೊದಲ ಹೆಸರೇ ಆನಂದ್. ಆದರೆ ಇತ್ತೀಚಿನ ತಲೆಮಾರಿನ ಹದಿಹರೆಯದ ಪ್ರತಿಭೆಗಳು ದೊಡ್ಡ ಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ. ಅದರಲ್ಲಿ ಗುಕೇಶ್ ಸಾಧನೆ ಮುಂಚೂಣಿಯಲ್ಲಿದೆ.

### ಬಾಲ್ಯದಿಂದಲೂ ಚೆಸ್ ಪ್ರೀತಿ

17 ವರ್ಷದ ಗುಕೇಶ್‌ಗೆ ಬಾಲ್ಯದಿಂದಲೂ ಚೆಸ್ ಬಗ್ಗೆ ಅಪಾರವಾದ ಆಸಕ್ತಿ. ತಂದೆ ರಜನಿಕಾಂತ್ ವೈದ್ಯರು. ತಂದೆಯ ಜೊತೆ ಆಗಾಗ ಆಟವಾಡುತ್ತ ಚೆಸ್ ಆಟವನ್ನು ವೃತ್ತಿಪರವಾಗಿ ಸ್ವೀಕರಿಸಿದರು. 2015ರಲ್ಲಿ ಒಂಬತ್ತು ವರ್ಷದ ಒಳಗಿನವರ ಶಾಲಾಮಟ್ಟದ ಏಷ್ಯನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದರು. 2017ರಲ್ಲಿ ಪುಣೆಯಲ್ಲಿ ನಡೆದ ಓಪನ್ ಚೆಸ್ ಚಾಂಪಿಯನ್‌ಷಿಪ್‌ನ 11 ವರ್ಷದ ಒಳಗಿನವರ ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಾರೆ. 2018ರಲ್ಲಿ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನ 12 ವರ್ಷದ ಒಳಗಿನವರ ವಿಭಾಗದಲ್ಲಿ, ಅದೇ ವರ್ಷ ಏಷ್ಯನ್ ಯೂತ್ ಚೆಸ್ ಚಾಂಪಿಯನ್‌ಷಿಪ್‌ನ ರ್‍ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಒಟ್ಟು ಐದು ಚಿನ್ನದ ಪದಕಗಳ ಒಡೆಯರಾಗಿದ್ದರು.

ಗುಕೇಶ್ ಕಿರಿಯ ವಯಸ್ಸಿನಲ್ಲಿಯೇ ಚೆಸ್ ಗ್ರ್ಯಾಂಡ್‌ಮಾಸ್ಟರ್ ಗೌರವ ಪಡೆದವರು. ಅವರು ಈ ಸಾಧನೆ ಮಾಡಿದಾಗ 12 ವರ್ಷ ಏಳು ತಿಂಗಳು, 17 ದಿನಗಳು ಮಾತ್ರ! 2024ರ ಜನವರಿ ಫಿಡೆ ರೇಟಿಂಗ್ ಪ್ರಕಾರ ಗುಕೇಶ್ 25ನೇ ಸ್ಥಾನದಲ್ಲಿದ್ದಾರೆ. 2022ರಲ್ಲಿ ಚೆನ್ನೈನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಮೊದಲ ಬೋರ್ಡ್‌ನಲ್ಲಿ ಚಿನ್ನದ ಪದಕ ಗಳಿಸಿದ್ದರು. ನಂತರ ಅವರ ರ್‍ಯಾಂಕಿಂಗ್ ಏರುತ್ತಲೇ ಇದೆ. ಗುಕೇಶ್ ಉತ್ತಮ ಸಾಧನೆಯ ನೆರವಿನಿಂದ ಒಲಿಂಪಿಯಾಡ್‌ನಲ್ಲಿ ಭಾರತ ತಂಡ ಓಪನ್ ವಿಭಾಗದಲ್ಲಿ ಕಂಚಿನ ಪದಕ ಜಯಿಸಿತ್ತು.

ಒಂದೆಡೆ ಗುಕೇಶ್ ಪ್ರಮುಖ ಟೂರ್ನಿಗಳಲ್ಲಿ ಪ್ರಶಸ್ತಿಗಳನ್ನು ಗೆಲ್ಲುತ್ತ ಸಾಗುತ್ತಿದ್ದರೆ, ಭಾರತದ ಇನ್ನಷ್ಟು ಪ್ರತಿಭಾನ್ವಿತ ಆಟಗಾರರು ಸ್ಪರ್ಧೆ ಒಡ್ಡುತ್ತಲೇ ಭಾರತದ ಕೀರ್ತಿ ಪತಾಕೆ ಹಾರಿಸುತ್ತಲೇ ಇದ್ದಾರೆ. ಆದರೆ ಗುಕೇಶ್ ಸಾಧನೆ ಜಗತ್ತಿನ ಗಮನಸೆಳೆದಿದ್ದು 2022ರಲ್ಲಿ. ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಆಗ ಗೆಲುವು ಸಾಧಿಸಿದ್ದರು.

ಹಲವು ತಿಂಗಳುಗಳ ಹಿಂದೆ ತಮ್ಮ ಮಗನ ಕುರಿತು ಮಾಧ್ಯಮಗಳಿಗೆ ಸಂದರ್ಶನ ನೀಡಿದ್ದ, ವೃತ್ತಿಯಿಂದ ಸೂಕ್ಷ್ಮ ಜೀವಶಾಸ್ತ್ರಜ್ಞೆಯಾಗಿರುವ ಪದ್ಮಾ – 'ಮಗನಿಗೆ ಮೊದಲಿನಿಂದಲೂ ಚೆಸ್ ಬಗ್ಗೆ ಅತೀವ